# ಹುಂಜ ಕಲಿತ ಪಾಠ



■ ರವೀಂದ್ರ ಸಿಂಗ್ ಕೋಲಾರ
ಕಲೆ: ಸಂತೋಷ್ ಸಸಿಹಿತ್ಲು

ರೈತನೊಬ್ಬನ ಕೊಟ್ಟಿಗೆಯಲ್ಲಿ ಹಸು ಮತ್ತು ಹುಂಜ ಒಟ್ಟಿಗೆ ವಾಸ ಮಾಡುತ್ತಿದ್ದವು. ಹುಂಜ ಹಗಲೆಲ್ಲಾ ಬಯಲಲ್ಲಿ ಹೋಗಿ ಮೇಯ್ದು ಸಂಜೆಗತ್ತಲು ಆವರಿಸುತ್ತಿದ್ದಂತೆ ಕೊಟ್ಟಿಗೆಗೆ ಬಂದುಬಿಡುತಿತ್ತು. ಹಸು ಮೇಯಲು ಹೊರಗಡೆ ಹೋದಾಗಲೆಲ್ಲಾ ರೈತನು ಅದರ ಕಾವಲು ಕಾಯುತ್ತಿದ್ದ. ಸಂಜೆ ಆಯಿತೆಂದರೆ ಆ ಹಸುವನ್ನು ಯಥಾ ಪ್ರಕಾರ ಕೊಟ್ಟಿಗೆಯಲ್ಲಿನ ಗೂಟಕ್ಕೆ ಕಟ್ಟುತ್ತಿದ್ದ.

ಚೆನ್ನಾಗಿ ತಿಂದು ಕೊಬ್ಬಿದ್ದ ಹುಂಜಕ್ಕೆ ಜಂಬ ಸ್ವಲ್ಪ ಹೆಚ್ಚಾಗಿಯೇ ಇತ್ತು. ಹಾಗಾಗಿ ಅದು ಹಸುವನ್ನು ರಾತ್ರಿ ನೆಮ್ಮದಿಯಿಂದ ಇರಲು ಬಿಡುತ್ತಿರಲಿಲ್ಲ. ತಾನಿಲ್ಲದೆ ಲೋಕಕ್ಕೆ ಬೆಳಕೇ ಬರದು ಎಂಬ ಭ್ರಮೆಯಲ್ಲಿ ಅದು ಮುಳುಗಿತ್ತು. ರೈತನಿಗೆ ನನ್ನ ಮೇಲೆ ಸಂಪೂರ್ಣ ನಂಬಿಕೆ ಇರುವುದರಿಂದ ನನ್ನನ್ನು ಕಾವಲು ಕಾಯುವುದಿಲ್ಲ. ಈ ಹಸು ರೈತನನ್ನು ಮೋಸ ಮಾಡಿ ಎಲ್ಲಿ ಓಡಿ ಹೋಗುವುದೋ ಎಂದು ರೈತನು ಅದನ್ನು ನಂಬದೆ ಹಗ್ಗದಿಂದ ಕಟ್ಟಿಹಾಕುತ್ತಾನೆ ಎಂಬೆಲ್ಲ ಸುಳ್ಳು ಮಾತುಗಳಿಂದ ಹಸುವಿಗೆ ಹುಂಜ ನಾನಾ ರೀತಿಯಲ್ಲಿ ಮೂದಲಿಸಿ ಅದಕ್ಕೆ ನೋವುಂಟು ಮಾಡುತ್ತಿತ್ತು. ಮೂಕವೇದನೆಯಲ್ಲಿ ಹಸು ಹುಂಜ ಹೇಳಿದ್ದೆಲ್ಲ ಸತ್ಯವೆಂದು ನಂಬಿಬಿಟ್ಟಿತ್ತು. ಇದರಿಂದ ಅತೀವವಾಗಿ ನೊಂದು ಕಣ್ಣೀರು ಸುರಿಸುತ್ತ ದಿನರಾತ್ರಿ ಕಳೆಯುತಿತ್ತು. ಹೀಗೆ ಕೆಲ ದಿನಗಳು ಕಳೆದ ನಂತರ ರೈತನು ಒಂದು ದಿನ ಅನ್ಯಕಾರ್ಯ ನಿಮಿತ್ತ ಬೇರೆ ಊರಿಗೆ ಹೋಗಬೇಕಾಗಿ ಬಂತು. ಕೊಟ್ಟಿಗೆಯಲ್ಲಿ ಹುಂಜ, ಹಸು ಇರುವುದರಿಂದ ಕಾವಲಿಗಾಗಿ ತಾನು ಸಾಕಿದ್ದ ನಾಯಿಯನ್ನು ಆ ಕೊಟ್ಟಿಗೆಯಲ್ಲಿ ಬಿಟ್ಟು ಹೋದನು. ರಾತ್ರಿ ಆಯಿತು. ಹುಂಜ ಎಂದಿನಂತೆ ಹಸುವಿಗೆ ಅದೇ ರೀತಿ ಮೂದಲಿಸಲು ಪ್ರಾರಂಭಿಸಿತು. ಇದನ್ನೆಲ್ಲ ಅಲ್ಲೇ ಮಲಗಿದ್ದ ನಾಯಿ ಆಲಿಸಿಕೊಳ್ಳುತ್ತಿತ್ತು. ಹಸುವಿನ ಸ್ಥಿತಿಯನ್ನು ಕಂಡು ಅದಕ್ಕೆ ಬಹಳ ಬೇಸರವೂ ಆಯಿತು. ಜಂಬದ ಹುಂಜ ಆಡುತ್ತಿದ್ದ ಮಾತುಗಳು ಆ ಹಸುವಿಗೆ ತೀವ್ರವಾಗಿ ಬಾಧಿಸುತ್ತಿದೆ ಎಂಬುದನ್ನು ಅರಿತ ನಾಯಿಗೆ ಅತೀವ ಕೋಪ ಉಕ್ಕಿ ಬಂದಿತು. ಹುಂಜದ ಹತ್ತಿರ ಹೋಗಿ ಜೋರಾಗಿ ಬೊಗಳಿ ತನ್ನ ಕೋಪವನ್ನು ವ್ಯಕ್ತಪಡಿಸಿತು. ‘ಕೊಬ್ಬಿದ ಹುಂಜವೇ ನಿನಗೆ ಎಷ್ಟು ಸೊಕ್ಕು? ಮುಂಜಾನೆ ನೀನು ಕೂಗದೆ ಸುಮ್ಮನಿದ್ದರೆ ಲೋಕಕ್ಕೆ ಬೆಳಕಾಗುವುದಿಲ್ಲ ಎಂಬ ಭ್ರಮೆ ಇಟ್ಟುಕೊಂಡಿದ್ದೀಯಾ? ಅದನ್ನು ಬಿಟ್ಟು ಬಿಡು. ಸೂರ್ಯ ಹುಟ್ಟುವುದು ನಿನ್ನ ಕೂಗಿನಿಂದಲ್ಲ ಎಂಬ ಸತ್ಯ ನಿನಗೆ ತಿಳಿದಿರಲಿ. ಹಸುವಿನ ಸಹಾಯ ಗುಣ ನಿನಗೆ ತಿಳಿಯದೆ? ಹಸು ತನ್ನ ಕರುವಿಗೆ ನೀಡಬೇಕಾದ ಹಾಲನ್ನು ಉಳಿಸಿ ಮಕ್ಕಳಿಗಷ್ಟೇ ಅಲ್ಲದೆ ಇತರರಿಗೂ ನೀಡಿ ಜೀವ ರಕ್ಷಿಸುತ್ತದೆ. ಅದರ ಸಗಣಿಯನ್ನು ತಿಪ್ಪೆಗೆ ಸುರಿದು ಗೊಬ್ಬರ ಮಾಡಿ ಹೊಲಕ್ಕೆ ಹಾಕುತ್ತಾರೆ. ಆ ತಿಪ್ಪೆಯಲ್ಲಿನ ಹುಳ ಹುಪ್ಪಟಗಳನ್ನು ತಿಂದು ನೀನು ಬದುಕುತ್ತಿದ್ದೀಯಾ! ಇನ್ನೊಂದು ವಿಷಯ ನಿನಗೆ ಗೊತ್ತಿರಲಿ; ಇದರ ಗೊಬ್ಬರವನ್ನು ಗೋಬರ್ ಗ್ಯಾಸ್ ಅಂತ ಉರುವಲಾಗಿ ಕೂಡ ಬಳಸುತ್ತಿದ್ದಾರೆ. ಇದರ ಶಕ್ತಿಯ ಮುಂದೆ ನೀನು ಲೆಕ್ಕಕ್ಕೆ ಇಲ್ಲ. ಆದರೂ ಜಂಬಪಡುವೆ. ಹಸುವಿನ ಒಳ್ಳೆಯ ಗುಣವನ್ನು ನೀನು ದುರುಪಯೋಗಪಡಿಸಿಕೊಳ್ಳುತ್ತಿರುವೆ. ನಿನ್ನ ಕೊಕ್ಕಿನಿಂದ ಹಿಂಸಿಸಿದಾಗಲೂ ಅದು ಸಹಿಸಿಕೊಂಡಿರುತ್ತಿತ್ತು. ಆಗಲೂ ಇದರ ಸಹನಾಗುಣ ನಿನಗೆ ಅರ್ಥವಾಗಲಿಲ್ಲ. ಇನ್ನೊಬ್ಬರಿಗೆ ತೊಂದರೆಯನ್ನು ಕೊಡುವುದಾಗಲೀ, ಕಳ್ಳಬುದ್ಧಿಯಾಗಲೀ ಇದಕ್ಕೆ ಗೊತ್ತೇ ಇಲ್ಲ. ರೈತ ಇದಕ್ಕೆ ಹಗ್ಗದಿಂದ ಕಟ್ಟಿ ಹಾಕುವುದು ಹಾದಿ ತಿಳಿಯದೇ ಹಸು ಕಳೆದು ಹೋಗಬಾರದೆಂದು ಹೊರತು, ಅದರ ಮೇಲಿನ ಅಪನಂಬಿಕೆಯಿಂದಲ್ಲ. ಹಬ್ಬ ಗೃಹ ಪ್ರವೇಶಗಳಂಥ ಶುಭ ಕಾರ್ಯಗಳಿಗೆ ಹಸುವನ್ನು ದೇವರೆಂದು ಭಾವಿಸಿ ಪೂಜಿಸುತ್ತಾರೆ. ಆದರೆ ನಿನ್ನ ಜೀವನ ಹಾಗಲ್ಲ. ನಿನ್ನನ್ನು ಕೇವಲ ಮಾಂಸಕ್ಕಾಗಿ ಸಾಕುತ್ತಾರೆ. ಅದು ಬಿಟ್ಟರೆ ನಿನಗೆ ಯಾವುದೇ ಮಾನ್ಯತೆ ಇಲ್ಲ ಎಂದು ಆ ನಾಯಿ ಹುಂಜವನ್ನು ತರಾಟೆಗೆ ತೆಗೆದುಕೊಂಡಿತು. ಇನ್ನು ಮುಂದೆ